ಸಿಸಿ ನಂಃ 1939/2025

ಪಿ. ಡಬ್ಲ್ಯು 1

(ಇಂದು ದಿನಾಂಕಃ 09-03-2026 ರಂದು ಪಿ.ಡಬ್ಲ್ಯು.1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ- ಆರೋಪಿ ಪರ ವಕೀಲರಾದ ಶ್ರೀ ಹೆಚ್.ಎಂ ಎನ್ ರವರಿಂದಃ**

ನಾನು ಐ.ಟಿ.ಐ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಮಗೆ ಆರೋಪಿ ಎಷ್ಟು ವರ್ಷಗಳಿಂದ ಪರಿಚಯ ಎಂದರೆ ಸಾಕ್ಷಿ ಬಾಲ್ಯದಿಂದಲೂ ಪರಿಚಯ ಅಂತಾ ಉತ್ತರಿಸುತ್ತಾರೆ. ನಾನು ಪೇಂಟಿಂಗ್ ಮತ್ತು ಇಲೆಕ್ಟ್ರೀಷಿಯನ್ ಕೆಲಸ ಮಾಡುತ್ತೇನೆ. ನಾನು ಪೇಂಟಿಂಗ್ ಕೆಲಸವನ್ನು ಸ್ವಂತ ಹಾಗೂ ಬೇರೆಯವರ ಕೆಲಸಕ್ಕೂ ಹೋಗುತ್ತೇನೆ. ಪೇಂಟಿಂಗ್ ಮತ್ತು ಇಲೆಕ್ಟ್ರೀಷಿಯನ್ ಕೆಲಸದಿಂದ ನಿಮಗೆ ತಿಂಗಳಿಗೆ ಎಷ್ಟು ಆದಾಯ ಬರುತ್ತದೆ ಎಂದರೆ ಸಾಕ್ಷಿ ನಾನು ಸ್ವಂತ ಮಾಡಿದರೆ ರೂ. 25 ರಿಂದ 30 ಸಾವಿರ ಬರುತ್ತದೆ, ಬೇರೆಯವರ ಕೆಲಸ ಮಾಡಿದರೆ ತಿಂಗಳಿಗೆ ರೂ.18 ರಿಂದ 20 ಸಾವಿರ ಬರುತ್ತದೆ ಅಂತಾ ಉತ್ತರಿಸುತ್ತಾರೆ. ನಾನು ಮದುವೆ ಸಮಾರಂಭಗಳಿಗೆ ಲೈಟಿಂಗ್ ಕೆಲಸವನ್ನು ಮಾಡುತ್ತೇನೆ. ಲೈಟಿಂಗ್ ಕೆಲಸದಿಂದ ನಿಮಗೆ ತಿಂಗಳಿಗೆ ಎಷ್ಟು ಆದಾಯ ಬರುತ್ತದೆ ಎಂದರೆ ಸಾಕ್ಷಿ ರೂ.10,000/-ಆದಾಯ ಬರುತ್ತದೆ ಅಂತಾ ಉತ್ತರಿಸುತ್ತಾರೆ. ಲೈಟಿಂಗ್ ಕೆಲಸ ಪ್ರತಿತಿಂಗಳು ಇರುವುದಿಲ್ಲ ಎಂದರೆ ಸಾಕ್ಷಿ ಮದುವೆ ಸಮಾರಂಭಗಳು, ಹುಟ್ಟುಹಬ್ಬಗಳು, ಜಾತ್ರೆ ವಗೈರೆ ಇದ್ದಾಗ ಲೈಟಿಂಗ್ ಕೆಲಸ ಇರುತ್ತದೆ ಅಂತಾ ಉತ್ತರಿಸುತ್ತಾರೆ. ಆ ರೀತಿ ಲೈಟಿಂಗ್ ಕೆಲಸ ವರ್ಷದಲ್ಲಿ 2 ರಿಂದ 3 ತಿಂಗಳು ಇರುತ್ತದೆ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ.

2. ನಿಮ್ಮ ಮನೆಯನ್ನು ನೀವೇ ನಿರ್ವಹಿಸಿಕೊಂಡು ಹೋಗುತ್ತೀರಿ ಎಂದರೆ ಸಾಕ್ಷಿ ನನ್ನ ತಂದೆ ಸಹ ನಿರ್ವಹಿಸುತ್ತಾರೆ ಅಂತಾ ಉತ್ತರಿಸುತ್ತಾರೆ. ನಿಮಗೆ ಬರುವ ಆದಾಯದಿಂದ ನಿಮ್ಮ ಮನೆಯ ಖರ್ಚು ವೆಚ್ಚಗಳನ್ನು ನಿಭಾಯಿಸಲು ಮಾತ್ರ ಸಾಕಾಗುತ್ತದೆ ಎಂದರೆ ಸಾಕ್ಷಿ ನಮ್ಮ ತಂದೆ ಸಹ ಮನೆ ಖರ್ಚುಗಳನ್ನು ನಿಭಾಯಿಸುವುದರಿಂದ ನನಗೆ ಹಣ ಉಳಿಯುತ್ತದೆ ಅಂತಾ ಉತ್ತರಿಸುತ್ತಾರೆ. ನಿಮ್ಮ ತಿಂಗಳ ಆದಾಯದಲ್ಲಿ ಎಷ್ಟು ಉಳಿಯುತ್ತದೆ ಎಂದರೆ ಸಾಕ್ಷಿ ರೂ. 5 ರಿಂದ 10 ಸಾವಿರ ಉಳಿಯುತ್ತದೆ ಅಂತಾ ಉತ್ತರಿಸುತ್ತಾರೆ.

3. ನನ್ನ ಬಾಬ್ತು ಬ್ಯಾಂಕಿನಲ್ಲಿ ಉಳಿತಾಯ ಖಾತೆ ಇಂಡಿಯನ್ ಓವರಸೀಸ್ ಬ್ಯಾಂಕ್, ಕಾರವಾರ ಶಾಖೆಯಲ್ಲಿದೆ. ನನ್ನ ಬಳಿ ಅದೊಂದೇ ಬ್ಯಾಂಕ್ ಖಾತೆ ಇದೆ. ನಾನು ಉಳಿತಾಯ ಮಾಡಿದರೆ ಸದ್ರಿ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತೇನೆ ಎಂದರೆ ಸಾಕ್ಷಿ ಜಮಾ ಮಾಡುತ್ತೇನೆ ಹಾಗೂ ಹಣವನ್ನು ತೆಗೆಯುತ್ತೇನೆ

ಅಂತಾ ಉತ್ತರಿಸುತ್ತಾರೆ. ತಿಂಗಳಿಗೆ ನೀವು ಎಷ್ಟು ಹಣ ನಿಮ್ಮ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತೀರಿ ಎಂದರೆ ಸಾಕ್ಷಿ ರೂ. 5,000/–, ಕೆಲವೊಮ್ಮೆ ರೂ.10,000/– ಹಾಗೂ ಇನ್ನು ಕೆಲವೊಮ್ಮೆ ರೂ.20,000/– ಜಮಾ ಆಗುತ್ತದೆ ಅಂತಾ ಉತ್ತರಿಸುತ್ತಾರೆ.

3. ನಾನು ಪೇಂಟಿಂಗ್ ಮತ್ತು ಲೈಟಿಂಗ್ ಕೆಲಸವನ್ನು ಕಳೆದ 14 ವರ್ಷಗಳಿಂದ ಮಾಡಿಕೊಂಡು ಬಂದಿರುತ್ತೇನೆ.

4. ನಿಮ್ಮ ಪ್ರಕಾರ ಆರೋಪಿಗೆ ರೂ. 8,00,000/– ಹಣವನ್ನು ಯಾವಾಗ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ದಿನಾಂಕ 07–02–2024 ರಂದು ಕೊಟ್ಟಿದ್ದೆ ಅಂತಾ ಉತ್ತರಿಸುತ್ತಾರೆ. ಆರೋಪಿಗೆ ರೂ.8,00,000/– ಕೊಡಲು ನೀವು ಹಣ ಎಲ್ಲಿಂದ ತಂದಿದ್ದೀರಿ ಎಂದರೆ ಸಾಕ್ಷಿ ನನ್ನ ಸ್ವಂತ ಹಣ, ನನ್ನ ತಾಯಿ ಅನಾರೋಗ್ಯದಲ್ಲಿದ್ದಾಗ ಕುಟುಂಬದವರು ಹಣ ಸಹಾಯ ಮಾಡಿದ್ದ ಹಣ, ಹಾಗೂ ತಂದೆಯವರು ಕೊಟ್ಟ ಹಣವನ್ನು ಒಟ್ಟು ಸೇರಿಸಿ ಹಾಗೂ ನನ್ನ ತಾಯಿಯ ಚಿನ್ನಾಭರಣಗಳನ್ನು ಮಾರಾಟ ಮಾಡಿದ್ದು ಅದನ್ನು ಸಹ ಸೇರಿಸಿ ಆರೋಪಿಗೆ ಹಣ ಕೊಟ್ಟಿದ್ದೆ ಅಂತಾ ಉತ್ತರಿಸುತ್ತಾರೆ. ನಿಮ್ಮ ತಾಯಿಯ ಚಿನ್ನಾಭರಣಗಳನ್ನು ಮಾರಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಬಹುದೇ ಎಂದರೆ ಸಾಕ್ಷಿ ಅದು ನನ್ನ ತಾಯಿ ಮಾರಾಟ ಮಾಡಿದ್ದರಿಂದ ದಾಖಲೆಗಳು ಹಾಜರುಪಡಿಸಲು ಆಗುವುದಿಲ್ಲ ಅಂತಾ ಉತ್ತರಿಸುತ್ತಾರೆ.

5. ಯಾವುದೇ ವ್ಯಕ್ತಿಗೆ ರೂ.20,000/–ಕ್ಕಿಂತ ಹೆಚ್ಚು ಹಣವನ್ನು ಕೊಡಬೇಕಾದರೆ ಖಾತೆಗೆ ವರ್ಗಾವಣೆ ಮಾಡಿಯೇ ಕೊಡಬೇಕಾಗುತ್ತದೆ ಎಂದರೆ ಸಾಕ್ಷಿ ಆ ಸಮಯದಲ್ಲಿ ಆರೋಪಿ ಹಣ ನಗದಾಗಿಯೇ ಬೇಕು ಅಂತಾ ಕೇಳಿಕೊಂಡಿದ್ದರಿಂದ ನಾನು ಅವರಿಗೆ ರೂ. 8,00,000/– ಹಣವನ್ನು ನಗದಾಗಿಯೇ ಕೊಟ್ಟಿದ್ದೆ ಅಂತಾ ಉತ್ತರಿಸುತ್ತಾರೆ.

**ಸಿಸಿ ನಂಃ 1939/2025**

**ಪಿ. ಡಬ್ಲ್ಯು 1**

6. ನೀವು ಆದಾಯ ತೆರಿಗೆ ಪಾವತಿ ಮಾಡುತ್ತೀರಾ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ.

**ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ನೀಡಿ ಮುಂದುಡಲಾಗಿದೆ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಕಾರವಾರ.**